## ಐಪಿಎಲ್ ಸ್ಟಾರ್

### ದೇವದತ್ ಪಡಿಕ್ಕಲ್

ಕರ್ನಾಟಕದ ಪ್ರತಿಭೆ ದೇವದತ್ ಪಡಿಕ್ಕಲ್ 2018–19ರ ದೇಶಿ ಋತುವಿನಲ್ಲಿ ರಾಜ್ಯ ರಣಜಿ ತಂಡದಲ್ಲಿ ಸ್ಥಾನ ಗಳಿಸಿದರು. ಮರುವರ್ಷದ ಐಪಿಎಲ್‌ನಲ್ಲಿ ಆರ್‌ಸಿಬಿ ಈ ಆಟಗಾರನನ್ನು ಖರೀದಿಸಿತು. ಐಪಿಎಲ್‌ನಲ್ಲಿ ಪದಾರ್ಪಣೆ ಮಾಡಿದ ಬಳಿಕದ ಮೊದಲ ನಾಲ್ಕು ಪಂದ್ಯಗಳ ಪೈಕಿ ಮೂರರಲ್ಲಿ ಅರ್ಧಶತಕ ಗಳಿಸಿದ ಮೊದಲ ಆಟಗಾರ ಎನ್ನುವ ಕೀರ್ತಿಯನ್ನೂ ದೇವದತ್ ಸಂಪಾದಿಸಿದರು. ತಮ್ಮ ಚೊಚ್ಚಲ ಐಪಿಎಲ್‌ನಲ್ಲಿ ಆಡಿದ 15 ಪಂದ್ಯಗಳಿಂದ 473 ರನ್ ಗಳಿಸಿ, ಟೂರ್ನಿಯ ಉದಯೋನ್ಮುಖ ಆಟಗಾರ ಪ್ರಶಸ್ತಿಗೂ ಭಾಜನರಾದರು.

2019–20ರ ದೇಶಿ ಋತುವಿನ ವಿಜಯ್ ಹಜಾರೆ ಟೂರ್ನಿಯಲ್ಲಿ ದೇವದತ್ 11 ಪಂದ್ಯಗಳಿಂದ 609 ರನ್ ಗಳಿಸಿ, ಟೂರ್ನಿಯಲ್ಲಿ ಒಟ್ಟು ಹೆಚ್ಚು ರನ್ ಗಳಿಸಿದ ಪಟ್ಟಿಯಲ್ಲಿ ಅಗ್ರಸ್ಥಾನ ಸಂಪಾದಿಸಿದರು. ಈ ಎಲ್ಲಾ ಸಾಧನೆಗಳ ಬಲ ರಾಷ್ಟ್ರೀಯ ತಂಡದಲ್ಲಿ ಪ್ರವೇಶ ಪಡೆಯಲು ಹೆದ್ದಾರಿಯಾಯಿತು. 2021ರಲ್ಲಿ ಶ್ರೀಲಂಕಾ ವಿರುದ್ಧದ ಏಕದಿನ ಮತ್ತು ಟ್ವೆಂಟಿ–20 ಸರಣಿಗೆ ಅವಕಾಶ ಪಡೆದರು. ಅಂತಿಮ ಹನ್ನೊಂದರ ತಂಡದಲ್ಲಿಯೂ ಅವಕಾಶ ಲಭಿಸಿತು.





ಆರ್‌ಸಿಬಿ ಈ ಬಾರಿಯಾದರೂ ಗೆಲ್ಲುವುದೇ ಟ್ರೋಫಿ?

ಎದುರಾದರೂ 2008ರಿಂದ ನಿರಂತರವಾಗಿ ಐಪಿಎಲ್ ನಡೆಸಿಕೊಂಡು ಬರಲಾಗುತ್ತಿದೆ. ಈ ಟೂರ್ನಿ ಭಾರತದ ಆಟಗಾರರಿಗೆ ಏಕದಿನ ಮತ್ತು ಟೆಸ್ಟ್ ಮಾದರಿಯಲ್ಲಿ ಉತ್ತಮ ಪ್ರದರ್ಶನ ನೀಡಲು ನೆರವಾಗಿದೆ. ಇತ್ತೀಚೆಗೆ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ವಿರುದ್ಧ ಭಾರತದ ಕೊನೆಯ ಕ್ರಮಾಂಕದ ಆಟಗಾರರು ತೋರಿದ ಬ್ಯಾಟಿಂಗ್ ಸಾಮರ್ಥ್ಯ ಇದಕ್ಕೆ ಸಾಕ್ಷಿಯಂತಿದೆ.

### ಬಾಲಂಗೋಚಿಗಳಿಗೂ ಬಂತು ಕಾಲ

‘ಚಿನ್ನದ ಹುಡಿ (ಗೋಲ್ಡ್ ಡಸ್ಟ್)’ – ಭಾರತ ಹಾಗೂ ಇಂಗ್ಲೆಂಡ್ ತಂಡಗಳ ನಡುವೆ ಆಗಸ್ಟ್‌ನಲ್ಲಿ ನಾಟಿಂಗ್ ಹ್ಯಾಮ್‌ನಲ್ಲಿ ನಡೆದ ಮೊದಲ ಕ್ರಿಕೆಟ್ ಪಂದ್ಯ ಡ್ರಾ ಆದ ಬಳಿಕ ನಾಯಕ ವಿರಾಟ್ ಕೊಹ್ಲಿ ಹೇಳಿದ ಮಾತಿದು.

ಟೆಸ್ಟ್ ಆಡುವ ಎಲ್ಲಾ ರಾಷ್ಟ್ರಗಳ ಎದುರಿನ ಪಂದ್ಯಗಳಲ್ಲಿ ಭಾರತದ ಕೆಳ ಕ್ರಮಾಂಕದ (ಬಾಲಂಗೋಚಿಗಳು) ಆಟಗಾರರು ಬ್ಯಾಟಿಂಗ್‌ನಲ್ಲಿ ಅತ್ಯಂತ ಕಳಪೆ ಪ್ರದರ್ಶನ ನೀಡಿದ್ದರು. ಇದರಿಂದಾಗಿ ಅವರು ತಂಡದಲ್ಲಿ ಬೌಲಿಂಗ್‌ಗೆ ಮಾತ್ರ ಸೀಮಿತ ಎನ್ನುವಂತಾಗಿತ್ತು. ಎಂಟು, ಒಂಬತ್ತು ಮತ್ತು ಹತ್ತನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡುವ ಆಟಗಾರರು ನಿರಂತರವಾಗಿ ವೈಫಲ್ಯ ಅನುಭವಿಸುವುದು ಭಾರತ ತಂಡದ ದೊಡ್ಡ ದೌರ್ಬಲ್ಯವೂ ಆಗಿತ್ತು. ಹೀಗಾಗಿ ಇತ್ತೀಚಿನ ವರ್ಷಗಳಲ್ಲಿ ಯಾವುದೇ ತಂಡದ ಕೆಳಕ್ರಮಾಂಕದ ಆಟಗಾರರು ಅತ್ಯಂತ ಕಡಿಮೆ ಮೊತ್ತಕ್ಕೆ ಬೇಗನೆ ವಿಕೆಟ್ ಒಪ್ಪಿಸುವುದು ವಿಶೇಷವೆನಿಸುತ್ತಿರಲಿಲ್ಲ. ಭಾರತದ ಕೊನೆಯ ಮೂವರು ಆಟಗಾರರು ಟೆಸ್ಟ್ ಆಡುವ ರಾಷ್ಟ್ರಗಳ ಎದುರು 2018ರಿಂದ ಅತ್ಯಂತ ಕಳಪೆ ಬ್ಯಾಟಿಂಗ್ ಮಾಡಿದ್ದಾರೆ. ಮೇಲಿನ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಔಟಾದರೆ ಭಾರತದ ‘ಪೆವಿಲಿಯನ್ ಪರೇಡ್’ ಶುರುವಾಗುತ್ತಿತ್ತು. ಕೊನೆಯ ಮೂವರು ಆಟಗಾರರು ತಂಡದಲ್ಲಿದ್ದರೂ ಬ್ಯಾಟಿಂಗ್‌ಗೆ ಲೆಕ್ಕಕ್ಕಿಲ್ಲ ಎನ್ನುವಂತಾಗಿತ್ತು.

ಇತ್ತೀಚಿನ ಕೆಲವು ಟೆಸ್ಟ್ ಪಂದ್ಯಗಳಲ್ಲಿ ಭಾರತದ ಬಾಲಂಗೋಚಿಗಳು ಸಂಕಷ್ಟದ ಸ್ಥಿತಿಯಲ್ಲಿದ್ದ ತಂಡವನ್ನು ಪಾರು ಮಾಡುತ್ತಿದ್ದಾರೆ. ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಮೊದಲ ಟೆಸ್ಟ್‌ನಲ್ಲಿ ತೋರಿದ ಪ್ರದರ್ಶನ ಇದಕ್ಕೆ ಸಾಕ್ಷಿ. ಆ ಪಂದ್ಯದಲ್ಲಿ ಬೂಮ್ರಾ 28 ರನ್ ಗಳಿಸಿ ವೈಯಕ್ತಿಕ ಗರಿಷ್ಠ ರನ್ ಮೊತ್ತ ಗಳಿಸಿದ ಸಾಧನೆ ಮಾಡಿದರು. ಬೂಮ್ರಾ 13 ರನ್ ಮತ್ತು ಸಿರಾಜ್ ಅಜೇಯ 7 ರನ್ ಗಳಿಸಿ ಭಾರತ ತಂಡದ ಮೊತ್ತ ಹೆಚ್ಚಿಸಲು ನೆರವಾದರು.